ಮಗಳು ಬರಿಗೈಯಲ್ಲಿ ಮನೆ ಬಿಟ್ಟು ನಡೆದಿದ್ದಾಳೆ. ಮನೆ ಖರ್ಚಿಗೆ ಅವನು ತಂದಿಟ್ಟುಕೊಂಡಿದ್ದ ದುಡ್ಡು ಬೀರುವಿನಲ್ಲಿ ಹಾಗೇ ಇದೆ. ಒಡವೆಗಳು ಕೈಗೆ ಸಿಗದಂತೆ ಲಾಕರಿನಲ್ಲಿ. ತೆಗೆದುಕೊಂಡು ಹೋಗಿದ್ದರೆ ಅವಳ ಬಟ್ಟೆಬರೆಗಳು ಮಾತ್ರ. ಅಷ್ಟು ಮಾತ್ರವೇ? ಅಲ್ಲ, ಅಲ್ಲ. ಸಮಾಜದೆದುರು ತಲೆಯೆತ್ತಿ ನಡೆಯುತ್ತಿದ್ದ ತನ್ನ ಘನತೆ, ಗೌರವ, ತನ್ನ ಮನಶ್ಶಾಂತಿ, ಸಾಲದ್ದಕ್ಕೆ ಮಗನೊಡನೆಯ ಆತ್ಮೀಯ ಸಂಬಂಧಕ್ಕೂ ಹುಳಿ ಹಿಂಡಿ ಹೋಗಿದ್ದಾಳೆ. ಬಾಯ್ಬಿಟ್ಟು ಹೇಳಿದನಲ್ಲ ಮಗ, ಅಕ್ಕಂಗೆ ಇಷ್ಟವಾದೋರ ಜೊತೆ ಅವಳು ಮದುವೆ ಮಾಡ್ಕೊಂಡ್ರೆ ಏನಾಗುತ್ತೆ ಅಪ್ಪ? ಈ ಪ್ರಶ್ನೆಯನ್ನೇ ಮುಂದಿಟ್ಟುಕೊಂಡು ಅವನು ತನ್ನನ್ನು ದ್ವೇಷಿಸಬಹುದೇ? ಅಕ್ಕ ಎಂದರೆ ಪಂಚಪ್ರಾಣ ಎನ್ನುವಂತಿದ್ದವನು ಈ ಕಾರಣದಿಂದ ತನ್ನಿಂದ ದೂರವಾಗುತ್ತಾನೆಯೇ? ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ? ತಾನು ಒಂಟಿಯಾಗುವೆನೇನೋ ಎನ್ನುವ ಅನಾಥಪ್ರಜ್ಞೆ ಕಾಡತೊಡಗಿ ಬದಿಯಲ್ಲಿ ಮಲಗಿದ್ದ ಮಗನನ್ನು, ತನಗಿಂತ ಎತ್ತರಕ್ಕೆ ಬೆಳೆದಿದ್ದವನನ್ನು, ಬಿಗಿಯಾಗಿ ಬಳಸಿದ ಚಿದಾನಂದ. ಆಗಿನ್ನೂ ನಿದ್ದೆ ಹತ್ತಿದ್ದ ಹುಡುಗ 'ಅಕ್ಕಾ...' ಎಂದು ಕನವರಿಸಿ ಬಿಕ್ಕಿದ.

* * *

ಅಕ್ಕ ಸತ್ತಳೆಂದು ಅಮಾವಾಸ್ಯೆ ನಿಲ್ಲುವುದಿಲ್ಲ. ಚಿದಾನಂದ ಪರಿಚಿತರು ಬಾಯ್ಬಿಟ್ಟು ಕೇಳುವ ಮೊದಲೇ ತಾನೇ ವಿಷಯವನ್ನು ಬಹಿರಂಗಪಡಿಸಿ ನಿರಾಳವಾದ. 'ಯಾರನ್ನೋ ಲವ್ ಮಾಡ್ತಿದ್ಲಂತೆ. ಬೇಡ ಅಂದಿದ್ದೇ ನೆಪ ಆಯ್ತು. ಮನೆ ಬಿಟ್ಟು ಹೋಗಿದಾಳೆ' ಎನ್ನುವ ಮಾತು ಕೆಲವರಲ್ಲಿ ಕನಿಕರವನ್ನು, ಕೆಲ ಸಿನಿಕರಲ್ಲಿ ಅವ್ಯಕ್ತ ಆನಂದವನ್ನು ಹುಟ್ಟಿಸಿ ಒಂದಷ್ಟು ದಿನ ಮಾತಿಗೆ ಆಹಾರವಾಯ್ತು.

'ಪೊಲೀಸ್ ಕಂಪ್ಲೇಂಟ್ ಕೊಟ್ಬಿಡಿ. ಎಲ್ಲಾದ್ರೂ ಹೋಗಿ ಜೀವ ತೆಕ್ಕೊಂಡ್ರೆ ಕೊನೆಗೆ ನಿಮ್ಮ ತಲೆಗೆ ಬರುತ್ತೆ' ಎನ್ನುವ ಸಲಹೆ ಅವನಿಗೆ ಪಥ್ಯವಾಗಲಿಲ್ಲ. ಮಗಳು ಜೀವ ತೆಗೆದುಕೊಳ್ಳುವಷ್ಟು ಅಳ್ಳೆದೆಯವಳೇನಲ್ಲ ಎಂದು ಅವನ ನಂಬಿಕೆ. ನನಗೆ ಸರಿ ಕಂಡ ದಾರಿ ಆಯ್ದುಕೊಳ್ಳುತ್ತಿದ್ದೇನೆ ಎಂದು ಸ್ಪಷ್ಟವಾಗಿ ಬರೆದಿಟ್ಟಿದ್ದಾಳೆ ಮಗಳು. ಸರಿ ಕಂಡ ದಾರಿ ಸಾವಿನ ಮನೆಯಾಗಿರಲು ಸಾಧ್ಯವಿಲ್ಲ. ಸಾಯುವವಳೇ ಆಗಿದ್ದರೆ ಮನೆ ಬಿಟ್ಟು ಯಾಕೆ ಹೋಗುತ್ತಿದ್ದಳು? ಸಾಯಬಹುದಿತ್ತು ಮನೆಯಲ್ಲೇ. ಅಪ್ಪನ ಹೊಟ್ಟೆ ಉರಿಸಲು ಅವನ ಕಣ್ಣೆದುರಲ್ಲೇ. ಪ್ರೇಮವಿವಾಹಕ್ಕೆ ಮನೆಯಲ್ಲಿ ಒಪ್ಪಲಿಲ್ಲವೆಂದು ಒಂಟಿಯಾಗಿ, ಜೋಡಿಯಾಗಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಪತ್ರಿಕೆಯಲ್ಲೇನಾದರೂ ಪ್ರಕಟವಾಗಿರಬಹುದೇ ಎನ್ನುವ ಆತಂಕದಿಂದ, ಭಯದಿಂದ ಪೇಪರಿನಲ್ಲಿ ಕಣ್ಣಾಡಿಸುತ್ತಿದ್ದ ಚಿದಾನಂದ. ಅಂಥದ್ದೇನೂ ಕಂಡುಬರದೆ ಇದ್ದಿದ್ದರಲ್ಲಿ ಸಮಾಧಾನ. ಸಾಯುವುದೇ ಅವರ ನಿರ್ಧಾರವಾಗಿದ್ದರೆ ಅದನ್ನು ಮುಂದಕ್ಕೆ ಹಾಕುವ ಸಂಭವವಿಲ್ಲ. ಅವೆಲ್ಲಾ ಒಂದು ಕ್ಷಣದ ಭಾವಾತಿರೇಕದ ತೀರ್ಮಾನಗಳು. ತಕ್ಷಣ ಕಾರ್ಯರೂಪಕ್ಕೆ ಬರುವಂಥವು. ಒಂದೊಂದಾಗಿ ದಿನಗಳು ಉರುಳಿ ಹೋದಂತೆಲ್ಲಾ ಮಗಳು ಸಾವಿನ ಮನೆಯ ಕದ ತಟ್ಟಿರಬಹುದೆಂಬ ಸಂಶಯ ದೂರವಾದರೂ ಮಗಳು ಧಿಕ್ಕರಿಸಿ ಹೋದ ರೀತಿಯಿಂದ ಅಸಮಾಧಾನ ಹೆಚ್ಚುತ್ತಾ ಬಂತು. ಈ ಸೌಭಾಗ್ಯಕ್ಕೆ ಮಕ್ಕಳನ್ನು ಹೃದಯಕ್ಕೆ ಹಚ್ಚಿಕೊಂಡು ಸಾಕಬೇಕಿತ್ತೇ? ಅಕ್ಕ ಹಾಗಾದರೆ, ತಮ್ಮ ಮತ್ತೇನಾಗುತ್ತಾನೋ? ಚಿಂತೆ ಚಿತೆಯಂತೆ ಸುಡುಸುಡುತ್ತಿದ್ದರೂ ದಿನಚರಿಯ ಮೇಲೆ ಅದರ ಪ್ರಭಾವ ಬೀಳದಂತೆ ಎಚ್ಚರ ವಹಿಸಿದ ಚಿದಾನಂದ.

ಮನೆಗೆಲಸದ ಸರೋಜನ ಜವಾಬ್ದಾರಿ ಈಗ ಮತ್ತಷ್ಟು ಹೆಚ್ಚಾಯ್ತು. ಬೆಳಿಗ್ಗೆ ಕೆಲಸಕ್ಕೆ ಬಂದವಳು ತರಕಾರಿ ಹೆಚ್ಚಿಕೊಟ್ಟು, ಕಾಯಿ ತುರಿದುಕೊಟ್ಟು, ಮಸಾಲೆ ಹುರಿದುಕೊಟ್ಟು, ಮಿಕ್ಸರಿನಲ್ಲಿ ತಿರುವಿಕೊಟ್ಟು, ಬೇಯಿಸುವುದಷ್ಟೇ ಚಿದಾನಂದನ ಕೆಲಸ. ಒಮ್ಮೊಮ್ಮೆ ಅದೂ ಕೂಡಾ ಸರೋಜನ ಸುಪರ್ದಿಗೆ ವಹಿಸಲ್ಪಡುತ್ತಿತ್ತು. ಭಾರ್ಗವ ಕೂಡ ಅಕ್ಕ ಇಲ್ಲದ ಬದುಕಿಗೆ ನಿಧಾನವಾಗಿ ಹೊಂದಿಕೊಳ್ಳತೊಡಗಿದ್ದ. ಸ್ವಸುಖಕ್ಕೆ ಅಡ್ಡ ಬರಲಿಲ್ಲ ಜಾತಿ. ಅಡುಗೆಗೆ ಸಹಕರಿಸಲು ಅಡ್ಡ ಬರಲಿಲ್ಲ ಜಾತಿ. ಆದರೂ ಜಾತಿಯ ಪ್ರಶ್ನೆ ಮುಂದಿಟ್ಟು ಮಗಳನ್ನು ತಾನು ಕೈಯಾರೆ ಮನೆ ಬಿಟ್ಟು ಹೋಗುವಂತೆ ಮಾಡಿದೆನೇ ಎನ್ನುವ ಪ್ರಶ್ನೆ ಪೆಡಂಭೂತದಂತೆ ಕಿತ್ತು ತಿನ್ನುವಾಗ ಚಿದಾನಂದ ಮತ್ತದೇ ಸಮರ್ಥನೆಯ ಮರೆಯಲ್ಲಿ ಸಮಾಧಾನ ಕಂಡುಕೊಳ್ಳುತ್ತಿದ್ದ.

ಸಮಾಜದ

